**ದಿನಾಂಕಃ 23-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಎನ್ ಎಂ ಬಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಗೊತ್ತು. ಅದೇ ರೀತಿ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಪೋಲಿಸಠಾಣೆ ಸಂಬಂದಸಿದ ದಾಖಲೆಗಳು ಬಗ್ಗೆ ಗೊತ್ತಿದೆ. ನನಗೆ ಓದಲು ಬರೆಯಲು ಬರುವುದಿಲ್ಲ ಆದರೆ ಸಹಿ ಮಾಡಿರುತ್ತೇನೆ. ನಾನು ಬರೆದ ದಾಖಲೆಗಳು ಕೇಳಿ ತಿಳಿದು ಅರ್ಥ ಮಾಡಿಕೊಂಡಿರುತ್ತೇನೆ. ನಾನು ಅಪಘಾತವಾಗುವ ಪೂರ್ವದಲ್ಲಿ ಬೆಳಗ್ಗೆ ಹೂವಿನ ವ್ಯಾಪಾರ ಮತ್ತು ಗುಟಕಾ ಹೋಲ್ ಸೇಲ್ ವ್ಯಾಪಾರ ಮಾಡುತ್ತಿದ್ದೆ. ನಾನು ಗುಟಕಾ ಹೋಲ್ ಸೇಲ್ ವ್ಯಾಪಾರ ಮಾಡಲು ಪರವಾಣಿಗೆ ಪಿಡೆದಿರುವುದಿಲ್ಲ ಮತ್ತು ನಾನು ವಾರ್ಷಿಕವಾಗಿ ಆದಾಯ ತೆರಿಗೆ ಕಟ್ಟುವುದಿಲ್ಲ.

1. ಸದರಿ ಗುಟಕಾ ವ್ಯಾಪಾರಕ್ಕೆ ಸಂಬಂದಿಸಿದಂತೆ ಬ್ಯಾಂಕಿನ ಮೂಲಕ ಮಾಡುತ್ತಿರಲಿಲ್ಲ. ನಾನು ಬ್ಯಾಂಕಿನ ಮೂಲಕವೇ ವ್ಯವಾಹಾರ ಮಾಡಬೇಕಾಗುತ್ತಿತ್ತು ನಾನು ವ್ಯಾಪಾರ ಮಾಡುವ ವಿಷಯ ಸುಳ್ಳು ಇರುವುದರಿಂದ ಬ್ಯಾಂಕ್ ವ್ಯವಹಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ತಿಂಗಳಿಗೆ 30 ಸಾವಿರ ರೂಪಾಯಿ ಆದಾಯಇತ್ತು ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

3. ಅಪಘಾತವಾದ ದಿನ ನಾನು ನನ್ನುರಿನಿಂದ ನಡುವಿನಹಳ್ಳಿ ಗ್ರಾಮಕ್ಕೆ ಹೋಗುತ್ತಿದ್ದೆ. ನಾನು ಮತ್ತು ನನ್ನ ತಮ್ಮ ರಾತ್ರಿ 8-30 ರಿಂದ 9 ಗಂಟೆ ಒಳಗೆಡೆ ಹೋಗುತ್ತಿದ್ದೆವು. ಸದರಿ ದ್ವಿಚಕ್ರವನ್ನು ನನ್ನ ತಮ್ಮ ಚಲಾವಣೆ ಮಾಡುತ್ತಿದ್ದ. ನಡುವಿನಹಳ್ಳಿ ಮತ್ತು ಹ್ಯಾಡಲ ಗ್ರಾಮದ ರಸ್ತೆ ನೇರವಾಗಿತ್ತು ಎಂದರೆ ಸರಿ. ರಾತ್ರಿ ಹೋಗುವಾಗ ಮಳೆ ಬರುತ್ತಾ ಇತ್ತು ಎದುರಿಗೆ ವಾಹನ ಬಂದಿದ್ದರಿಂದ ಸ್ಕಿಡ್ ಆಗಿ ಬಿದ್ದಿರುತ್ತೇವೆ. ಮುಂದೆ ಬರುತ್ತಿದ್ದ ವಾಹನ ನನಗೆ ಗೊತ್ತಿಲ್ಲ. ಅಂದಾಜು ಮುಂದೆ ಬರುತ್ತಿದ್ದ ವಾಹನ ಅದರ ಗಾತ್ರ ನೋಡಿ ಸ್ವರಾಜ ಮುಜಡಾ ಗಾಡಿ ಇರಬಹುದು.

4. ಸದರಿ ಹ್ಯಾಡ್ಲಾ ಮತ್ತು ನಡುವಿನಹಳ್ಳಿಯ ರಸ್ತೆ ಏಕ ವಾಹನ ಚಲಿಸುವ ರಸ್ತೆ. ಅಪಘಾತವಾದ ದಿನವೇ ದೂರು ದಾಖಲಿಸಿಲ್ಲ. ಅಪಘಾತವಾದ ದಿನದಿಂದ ಎಷ್ಟು ದಿನಕ್ಕೆ ದೂರು ದಾಖಲಿಸಲಾಗಿದೆ ಎಂದರೆ ಅಂದಾಜು 1 ವಾರ ಆಗಿರಬಹುದು. ದೂರನ್ನು ನಾನೇ ಸ್ವತಹ ಕೊಟ್ಟಿರುತ್ತೇನೆ. ದೂರನ್ನು ಬೇರೆಯವರ ಕಡೆಯಿಂದ ಬರೆಸಿಕೊಟ್ಟಿರುತ್ತೇನೆ. ಸದರಿ ದೂರಿ ಬರೆಸಿಕೊಟ್ಟದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ನಿಜ. ಆ ದೂರಿಗೆ ನಾನೇ ಮಾಹಿತಿ ನೀಡಿರುತ್ತೇನೆ ಎಂದರೆ ನಿಜ. ದೂರಿನಲ್ಲಿ ವ್ಯವಸಾಯ ಮಾಡಿರುತ್ತೇನೆ ಎಂದು ಬರೆಸಿದ್ದು ನಿಜ. ದೂರಿನಲ್ಲಿ ಸಹಿ ಮಾಡಿರುತ್ತೇನೆ ಎಂದರೆ ನಿಜ.

5. ಅಪಘಾತವಾದ ದಿನ ನಾನು ದಾಸನಹಳ್ಳಿಯಲ್ಲಿ ಪ್ರತಮ ಬಾರಿಗೆ ಚಿಕಿತ್ಸೆ ಪಡೆದಿರುತ್ತೇನೆ. ಅವತ್ತು ಪ್ರಥಮ ಚಿಕಿತ್ಸೆ ಪಡೆದು ನಂತರ ದಾವಣಗೇರೆಗೆ ಹೋಗಿರುತ್ತೇನೆ. ನಾನು ದಾಸನಹಳ್ಳಿಯಲ್ಲಿ ಪ್ರಥಮ ಚಿಕಿತ್ಸೆ ಪಡಿದಿದ ಬಗ್ಗೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಕತ್ತೆಬೆನ್ನೂರಿನ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ ಹೊರತು ದಾಸನಹಳ್ಳಿಯಲ್ಲಿ ತೋರಿಸಿಲ್ಲ ಎಂದರೆ ನಿಜ. ಆಸ್ಪತ್ರೆ ಸರ್ಕಾಗಿ ಆಸ್ಪತ್ರೆಯಾಗಿತ್ತು ಎಂದರೆ ನಿಜ. ಆ ಸದರಿ ಆಸ್ಪತ್ರೆಯ ವೈದ್ಯರ ಹೆಸರು ನನಗೆ ನೆನಪಿಲ್ಲ. ದಿಃ 11-04-2022 ರಂದು ನಾನು ಕತ್ತೆಬೆನ್ನೂರಿನಲ್ಲಿ ಪ್ರತಮ ಚಿಕಿತ್ಸೆ ಪಡೆದುಕೊಂಡಿಲ್ಲ ಆ ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತೆನೆ ಎಂದರೆ ಸರಿಯಲ್ಲ.

5. ನಾನು ಕತ್ತೆಬೆನ್ನೂರಿನಲ್ಲಿ ದಾವಾಖಾನೆಯಿಲ್ಲಿ ಕೇವಲ 2 ಗಂಟೆ ಇದ್ದೆ ನಂತರ ಮನೆಗೆ ಹೋಗಿದ್ದು ಆಮೇಲೆ ದಾವಣಗೇರೆಯ ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ಕತ್ತೆಬೆನ್ನೂರಿನಲ್ಲಿ ಗಾಯ ಬೈಕ್ ಮೇಲಿ ಬಿದಿದ್ದರಿಂದ ಆಗಿರುತ್ತೇನೆ ಎಂದು ಹೇಳಿರುತ್ತೇನೆ. ಅಲ್ಲಿಯ ವೈದ್ಯರು ಅಪಘಾತ ಕುರಿತು ಎಂ ಎಲ್ ಸಿ ಮಾಡಿಲ್ಲ. ಅಪಘಾತವಾದ ಪ್ರಕರಣಗಳಲ್ಲಿ ವೈದ್ಯರು ನುರಿತವಾಗಿ ಪೋಲಿಸರಿಗೆ ಮಾಹಿತಿ ತೋರಿಸಿರುತ್ತಾರೆ ಎಂದರೆ ನಿಜ. ನಿಪಿ-6 ಮತ್ತು 9 ರಲ್ಲಿ ನಾನೇ ಸ್ವತಹ ಬಿದ್ದು ಗಾಯ ಪಡಿಸಿಕೊಂಡಿರುತ್ತೇನೆ ಎಂದರೆ ಸರಿ. ಆಸ್ಪತ್ರೆಗೆ ನಾನು ಮೊದಲು ಹೋಗಿ ಹೇಳಿದ ಪ್ರಕಾರವೇ ವೈದ್ಯರು ಬರೆದಿರುತ್ತಾರೆ ಎಂದರೆ ನಿಜ. ನಾನು ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ 10 ದಿನ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಸಿಟಿ ಸೆಂಟ್ರಲ್ ಆಸ್ಪತ್ರೆಯಿಂದ ಬಂದ ನಂತರ ಕಸ್ತೂರಿಬಾ ಮಣಿಪಾಲ್ ಮತ್ತು ಎಸ್ ಎಸ್ ಆಸ್ಪತ್ರೆಯಲ್ಲಿ ತೋರಿಸಿರುತ್ತೇನೆ. ಸಾಕ್ಷಿ ತೆರೆದ ನ್ಯಾಯಾಲಯದಲ್ಲಿ ತನಗೆ ಆದ ಗಾಯದ ಕುರಿತು ಕೈಯನ್ನು ತೋರಿಸಿದ್ದಾರೆ ಅಲ್ಲಿ ಬುಜದ ತೋಳಿನಲ್ಲಿ ಮಾಂಸದ ಕಂಡ ತೆಗೆದು ಹಾಕಿರುವುದು ಕಂಡು ಬರುತ್ತದೆ. ಸದರಿ ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ವೈದ್ಯರು ಚಿಕಿತ್ಸೆ ಕೊಟ್ಟ ಬಗ್ಗೆ ಡಿಸ್ ಚಾರ್ಜ ಸಮರಿಯಲ್ಲಿ ಶಸ್ತ್ರ ಚಿಕಿತ್ಸೆ ಯಾದ ಬಗ್ಗೆ ತೋರಿಸಿಲ್ಲ ಬರೆ ಒಳ ರೋಗಿಯಾದ್ದ ತೋರಿಸಿದ್ದಾರೆ ಎಂದರೆ ನಿಜ.

6. ಸಿಟಿ ಸೆಂಟ್ರಲ್ ಆಸ್ಪತ್ರೆರವರು ಡಸ್ ಚಾರ್ಜ ಮಾಡಿದ ನಂತರ ಮುಂದುವರೆದ ಚಿಕಿತ್ಸೆಗೆ ಬರುಲು ಹೇಳಿದ್ದರು. ಮುಂದುವರೆದ ಚಿಕಿತ್ಸೆಯಲ್ಲಿ ಯಾವ ರೀತಿಯ ಚಿಕಿತ್ಸೆ ಕೊಟ್ಟಿರುತ್ತಾರೆ ಎಂದು ನಾನು ತೋರಿಸಿಲ್ಲ ಮತ್ತು ದಾಖಲೆಗಳನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ಗುಣಮುಖವಾಗದ ಕಾರಣ ಕಸ್ತೂರಿಬಾ ಮಣಿಪಾಲ್ ಆಸ್ಪತ್ರೆಗೆ ತೋರಿಸಿರುತ್ತೇನೆ. ಮಣಿಪಾಲ್ ಆಸ್ಪತ್ರೆಯಲ್ಲಿ ಯಾವುದೇ ಶಸ್ತರ ಚಿಕಿತ್ಸೆ ಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ದಾಖಲೆಗಳನ್ನು ಹೆಚ್ಚಿನ ವಿಮಾ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ನಿಪಿ-2 ರಂದತೆ 11-04-2022 ರಿಂದ 13-04-2022 ರವರೆಗೆ ನಾನು ಮನೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ನಿಜ. ಅದೇ ರೀತಿ ನಿಪಿ-2 ರಲ್ಲಿ ನಾನು ಯಾರ ವಿರುದ್ದ ದಾಖಲಿಸಿಲ್ಲ ಎಂದು ತೋರಿಸಿರುತ್ತೇನೆ ಎಂದರೆ ನಿಜ.

ಈ ಹಂತದಲ್ಲಿ ಮದ್ಯಾಹ್ನದ ಬೋಜನದ ಸಮಯವಾಗಿರುವುದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ

**ಊಟದ ವಿರಾಮ ಆದ ನಂತರ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಎನ್ ಎಂ ಬಿ ವಕೀಲರಿಂದಃ**

**ಪಾಟೀ ಸವಾಲುಃ** 2 ನೇ ಎದುರುದಾರರ ಪರ ವಕೀಲರಾದ ಶ್ರೀ.ಎನ್ ಎಂ ಬಿ ವಕೀಲರು ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ